# 2025-26 ನೇ ಸಾಲಿನ MIDH ಯೋಜನೆಯಡಿಯಲ್ಲಿಅಣಬೆ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಮಾರ್ಗಸೂಚಿ

ಅಣಬೆಯು ಪ್ರೋಟೀನ್ ಹಾಗೂ ಜೀವಸತ್ವಗಳು ಹೇರಳವಾಗಿರುವ ಮತ್ತು ಕಡಿಮೆ ಶರ್ಕರಪಿಷ್ಠ ಹೊಂದಿರುವ ಆಹಾರವಾಗಿರುವುದರಿಂದ ಇತ್ತೀಚಿನ ದಿನಗಳಲ್ಲಿ ಇದರ ಕೃಷಿಯು ಒಂದು ಪ್ರಮುಖ ಉದ್ದಿಮೆಯಾಗಿ ಬೆಳೆಯುತ್ತಿದೆ. ಅಣಬೆಯ ಕೃಷಿ ಮತ್ತು ಅದರ ಉಪಯುಕ್ತತೆ ಕುರಿತಂತೆ ಗ್ರಾಮೀಣ ಜನರು, ರೈತರು, ರೈತ ಮಹಿಳೆಯರು ಹಾಗೂ ನಗರವಾಸಿಗಳಲ್ಲಿ ಇದನ್ನು ಜನಪ್ರಿಯಗೊಳಿಸಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಉತ್ತಮ ಗುಣಮಟ್ಟದ ಸ್ಪಾನ್ ಉತ್ಪಾದನೆ, ಸಂಸ್ಕರಣೆ, ಮಾರುಕಟ್ಟೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಪ್ರಚಾರ ಮತ್ತು ತರಬೇತಿ ಕಾರ್ಯಕ್ರಮಗಳಿಗೆ ಉತ್ತೇಜನವನ್ನು ನೀಡಿ ಪ್ರೋತ್ಸಾಹ ನೀಡುವ ಉದ್ದೇಶದಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಅಣಬೆ ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಿ, ಇವುಗಳನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

| | Cost Norms | Pattern of Assistance |
|---|---|---|
| Production Unit | Rs. 30.00 lakh/unit | 100% of the cost to public sector and 40% of cost for private sector, for meeting the expenditure on infrastructure, as credit linked back ended subsidy. |
| Spawn making unit | Rs. 20.00 lakh/unit | 100% of the cost to public sector and 40% of cost for private sector, for meeting the expenditure on infrastructure, as credit linked back ended subsidy. |
| Compost making Unit | Rs. 30.00 lakh/unit | 100% of the cost to public sector and 40% of cost for private sector, for meeting the expenditure on infrastructure, as credit linked back ended subsidy. |
| Low Cost/ Small Scale mushroom production unit | Rs.2.00 Lakh/unit for a structure of size of 200 sqft | Assistance @ 50% per unit for meeting expenditure on infrastructure and inputs subject to a maximum of 5 units per beneficiary. Availing bank loan is Exempted |

## 1. ಅಣಬೆ ಉತ್ಪಾದನಾ ಘಟಕ:

- ❖ ಈ ಘಟಕದಡಿ ಸರ್ಕಾರಿ / ಖಾಸಗಿ ವಲಯಗಳಲ್ಲಿ ಅಣಬೆ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲು ಉತ್ತೇಜನ ನೀಡುವುದು. ಸರ್ಕಾರಿ ಸಂಸ್ಥೆಗಳಾದ ಕೃಷಿ ವಿಶ್ವವಿದ್ಯಾನಿಲಯ ಅಥವಾ ಇತರೆ ವಿದ್ಯಾ ಸಂಸ್ಥೆಗಳು, ಇಲಾಖೆಗಳು ಹಾಗೂ ಸಂಶೋಧನಾ ಸಂಸ್ಥೆಗಳಿಗೆ ಗರಿಷ್ಠ ಶೇ. 100 ರಷ್ಟು ರೂ. 30.00 ಲಕ್ಷಗಳನ್ನು ಹಾಗೂ ಖಾಸಗಿ ಸಂಸ್ಥೆಗಳಿಗೆ ಶೇ. 40 ರಷ್ಟು ಗರಿಷ್ಟ ರೂ.12.00 ಲಕ್ಷಗಳ ಸಹಾಯಧನವನ್ನು ನೀಡಲಾಗುವುದು.
- ❖ ಖಾಸಗಿ ವಲಯಗಳಲ್ಲಿ ನಿರ್ಮಾಣಕ್ಕೆ RBI ಅನುಮೋದಿತ online banking (IFSC code, RTGS, NEFT ಇತರೆ) ಸೌಲಭ್ಯವನ್ನು ಹೊಂದಿರುವ ಬ್ಯಾಂಕಿನಿಂದ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ. ಸಾಲ ಪಡೆದಿರುವ ಕುರಿತು, ಮಂಜೂರಾತಿ ಪತ್ರ ಹಾಗೂ **appraisal letter** ನೀಡುವುದು. ಸದರಿ ಕಾರ್ಯಕ್ರಮವು "credit Linked back ended subsidy" ಆಗಿದ್ದು ದೀರ್ಘಾವಧಿ ಸಾಲ (Term Loan) ಮಂಜೂರಾಗಿರಬೇಕು. ಅಗ್ರಿಇನ್ಫ್ರಾಸ್ಟ್ರಕ್ಚರ್ ಫಂಡ್ ಯೋಜನೆಯಡಿ 200 ಲಕ್ಷಗಳವರೆಗಿನ ಸಾಲಕ್ಕೆ ಶೇ.3 ರ ಬಡ್ಡಿಯ ಕಡಿತವಿದ್ದು, ಫಲಾನುಭವಿಗಳಿಗೆ ಈ ಸವಲತ್ತನ್ನು ಪಡೆಯಲು ಮಾಹಿತಿ ನೀಡಿ ನೆರವಾಗುವುದು.

- ಘಟಕವು ಕಾಮಗಾರಿಯನ್ನು ಅನುಷ್ಠಾನಗೊಳಿಸದಿದ್ದಲ್ಲಿ ಸಹಾಯಧನವನ್ನು ಪಾವತಿಸಿದ ದಿನಾಂಕದಿಂದ ರಾಷ್ಟ್ರೀಕೃತ ಬ್ಯಾಂಕ್ ಗಳು ವಿಧಿಸುವ ಬಡ್ಡಿ ದರದಲ್ಲಿ ಲೆಕ್ಕ ಹಾಕಿ ಅಸಲು ಮತ್ತು ಬಡ್ಡಿ ಸೇರಿಸಿ ವಾಪಸ್ಸು ಪಡೆಯಲು ಕ್ರಮವಹಿಸುವುದು.
- ಈ ಸಹಾಯಧನವನ್ನು ಅಣಬೆ ಉತ್ಪಾದನಾ ಘಟಕ ಸ್ಥಾಪಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಕಟ್ಟಡ ನಿರ್ಮಾಣ, ಮೂಲ ಸೌಕರ್ಯಗಳ ನಿರ್ಮಾಣ ಹಾಗೂ ಯಂತ್ರೋಪಕರಣಗಳ ಖರೀದಿ ಬಾಬ್ತುಗಳಿಗೆ ಮಾತ್ರವೇ ಉಪಯೋಗಿಸಿಕೊಳ್ಳುವುದು.
- ಅಣಬೆ ಉತ್ಪಾದನಾ ಘಟಕದ ಆವರ್ತಕ ವೆಚ್ಚ (Recurring Charges) ಹಾಗೂ ಸಿಬ್ಬಂದಿ ಮತ್ತು ಸಾದಿಲ್ವಾರು ವೆಚ್ಚವನ್ನು (Contingencies) ಭರಿಸಲು ಅವಕಾಶವಿರುವುದಿಲ್ಲ.
- ಅಣಬೆ ಉತ್ಪಾದನಾ ಘಟಕವು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾದ ನಂತರ ಪ್ರತಿ ವರ್ಷ ನಿಗಧಿತ ವೇಳೆಯೊಳಗೆ ಅಣಬೆಯನ್ನು ಉತ್ಪಾದನೆ ಮಾಡುವುದು.
- ಈ ಘಟಕದಡಿ ಸಹಾಯಧನ ಪಡೆಯಲು ಇಚ್ಛಿಸುವ ಸಂಸ್ಥೆಗಳು, ಸದರಿ ಯೋಜನೆಗೆ ರಾಷ್ಟ್ರೀಯ ತೋಟಗಾರಿಕೆ ಮಂಡಳಿಯಿಂದ ಅಥವಾ ಯಾವುದೇ ಸಂಘ / ಸಂಸ್ಥೆ / ಸರ್ಕಾರಿ ಮೂಲಗಳಿಂದ ಸಹಾಯಧನವನ್ನು ಪಡೆದಿಲ್ಲವೆಂಬ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡುವುದು.
- ಫಲಾನುಭವಿಯು ಸಹಾಯಧನ ಪಡೆಯಲು ಯಾವುದೇ ತಪ್ಪು ದಾಖಲೆಗಳನ್ನು ನೀಡಿರುವುದಿಲ್ಲ ಹಾಗೂ ಸಹಾಯಧನವನ್ನು ಯಾವ ಉದ್ದೇಶಕ್ಕಾಗಿ ಪಡೆಯಲಾಗಿರುತ್ತದೆಯೋ ಅದೇ ಉದ್ದೇಶಕ್ಕಾಗಿ ಬಳಸಲಾಗುವುದು ತಪ್ಪಿದ್ದಲ್ಲಿ ಸಹಾಯಧನವನ್ನು ಹಿಂದಿರುಗಿಸಲಾಗುವುದು ಎಂದು ಫಲಾನುಭವಿಯಿಂದ ಮುಚ್ಚಳಿಕೆ ಪತ್ರವನ್ನು ಪಡೆದು ಸಹಾಯಧನವನ್ನು ದುರುಪಯೋಗಪಡಿಸಿಕೊಳ್ಳದಂತೆ ಕ್ರಮವಹಿಸುವುದು.
- ಮೇಲ್ಕಂಡ ಅಂಶಗಳಿಗೆ ಸದರಿ ಸರ್ಕಾರಿ/ಖಾಸಗಿ ಸಂಸ್ಥೆಯ ಮುಖ್ಯಸ್ಥರು ಹಾಗೂ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರವರು ರೂ. 100/- ಗಳ ಛಾಪಾ ಕಾಗದದಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡ ನಂತರವೇ ಅನುದಾನವನ್ನು ಬಿಡುಗಡೆ ಮಾಡುವುದು.

**ಅಣಬೆ ಉತ್ಪಾದನಾ ಘಟಕದ ಅಂದಾಜು ಖರ್ಚಿನ ವಿವರಗಳು :**

| ಕ್ರ.ಸಂ | ವಿವರಗಳು | ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| A | **ಕಟ್ಟಡಗಳ ನಿರ್ಮಾಣ / ಮಾರ್ಪಾಡು / ನವೀಕರಣ / ಮೂಲಭೂತ ಸೌಕರ್ಯಗಳ ನಿರ್ಮಾಣ ಇತ್ಯಾದಿ** | 9.00 |
| a | Building includes cropping room, Pasteurization room, Laboratory, Store room and office room etc., | |
| B | **ಯಂತ್ರೋಪಕರಣಗಳ ಖರೀದಿ** | 21.00 |
| a | 1 Lab tables, 1 office table, chair & 6 wooden stools | |
| b | Godrej alma rah with cash chest | |
| c | Humidifiers for 3 cropping rooms / Automatically Humidity control / Air handling unit for temperature & CO2 control / temperature measuring instruments | |
| d | Aluminum racks for incubation / cropping room | |
| e | Trolley for transporting bags | |

| | | |
|---|---|---|
| f | LPG cylinders | |
| g | Pressure cooker 20 liters cap | |
| h | Refrigerator 300 liters cap | |
| i | Paddy straw 60 tons | |
| j | Polythene bags | |
| k | Miscellaneous (Solar panel, sprayers/water pump, Substrate seeding machine & spawned Substrate mixture, etc can also be used) | |
| | **Total** | **30.00** |

ಮೇಲೆ ತಿಳಿಸಿರುವ ಘಟಕವಾರು ವೆಚ್ಚವು ಅಂದಾಜು ವೆಚ್ಚವಾಗಿರುತ್ತದೆ.

## 2. ಸ್ಪಾನ್ ಉತ್ಪಾದನಾ ಘಟಕ :

- ಸದರಿ ಘಟಕದಡಿ ಸರ್ಕಾರಿ / ಖಾಸಗಿ ವಲಯಗಳಲ್ಲಿ ಅಣಬೆ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲು ಉತ್ತೇಜನವನ್ನು ನೀಡುವುದು. ಸರ್ಕಾರಿ ಸಂಸ್ಥೆಗಳಾದ ಕೃಷಿ ವಿಶ್ವವಿದ್ಯಾನಿಲಯ ಅಥವಾ ಇತರೆ ವಿದ್ಯಾ ಸಂಸ್ಥೆಗಳು, ಇಲಾಖೆಗಳು ಹಾಗೂ ಸಂಶೋಧನಾ ಸಂಸ್ಥೆಗಳಿಗೆ ಗರಿಷ್ಠ ಶೇ. 100 ರಷ್ಟು ರೂ. 20.00 ಲಕ್ಷಗಳನ್ನು ಹಾಗೂ ಖಾಸಗಿ ಸಂಸ್ಥೆಗಳಿಗೆ ಶೇ. 40 ರಷ್ಟು ಗರಿಷ್ಠ 8.00 ಲಕ್ಷಗಳ ಸಹಾಯಧನವನ್ನು ನೀಡಲಾಗುವುದು.
- ಖಾಸಗಿ ವಲಯಗಳಲ್ಲಿ ನಿರ್ಮಾಣಕ್ಕೆ RBI ಅನುಮೋದಿತ online banking (IFSC code, RTGS, NEFT ಇತರೆ) ಸೌಲಭ್ಯವನ್ನು ಹೊಂದಿರುವ ಬ್ಯಾಂಕಿನಿಂದ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ. ಸಾಲ ಪಡೆದಿರುವ ಕುರಿತು, ಮಂಜೂರಾತಿ ಪತ್ರ ಹಾಗೂ appraisal letter ನೀಡುವುದು. ಸದರಿ ಕಾರ್ಯಕ್ರಮವು credit Linked back ended subsidy ಆಗಿದ್ದು ದೀರ್ಘಾವಧಿ ಸಾಲ (Term Loan) ಮಂಜೂರಾಗಿರಬೇಕು. ಅಗ್ರಿಇನ್ಫ್ರಾಸ್ಟ್ರಕ್ಚರ್ ಫಂಡ್ ಯೋಜನೆಯಡಿ 200 ಲಕ್ಷಗಳವರೆಗಿನ ಸಾಲಕ್ಕೆ ಶೇ.3 ರ ಬಡ್ಡಿಯ ಕಡಿತವಿದ್ದು, ಫಲಾನುಭವಿಗಳಿಗೆ ಈ ಸವಲತ್ತನ್ನು ಪಡೆಯಲು ಮಾಹಿತಿ ನೀಡಿ ನೆರವಾಗುವುದು
- ಖಾಸಗಿ ವಲಯದಲ್ಲಿ ಈ ಸಹಾಯಧನವು credit linked back ended subsidy ಆಗಿರುತ್ತದೆ. ಘಟಕ ಕಾಮಗಾರಿ ಅನುಷ್ಠಾನಗೊಳಿಸದಿದ್ದಲ್ಲಿ ಸಹಾಯಧನವನ್ನು ಪಾವತಿಸಿದ ದಿನಾಂಕದಿಂದ ರಾಷ್ಟ್ರೀಕೃತ ಬ್ಯಾಂಕ್ ಗಳು ವಿಧಿಸುವ ಬಡ್ಡಿ ದರದಲ್ಲಿ ಲೆಕ್ಕಹಾಕಿ ಅಸಲು ಮತ್ತು ಬಡ್ಡಿ ಸೇರಿಸಿ ವಾಪಸ್ಸು ಪಡೆಯಲು ಕ್ರಮವಹಿಸುವುದು.
- ಈ ಸಹಾಯಧನವನ್ನು ಸ್ಪಾನ್ ಉತ್ಪಾದನಾ ಘಟಕ ಸ್ಥಾಪಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಕಟ್ಟಡ ನಿರ್ಮಾಣ, ಮೂಲ ಸೌಕರ್ಯಗಳ ನಿರ್ಮಾಣ ಹಾಗೂ ಯಂತ್ರೋಪಕರಣಗಳ ಖರೀದಿ ಬಾಬ್ತುಗಳಿಗೆ ಮಾತ್ರ ಉಪಯೋಗಿಸಿಕೊಳ್ಳುವುದು.
- ಸ್ಪಾನ್ ಉತ್ಪಾದನಾ ಘಟಕದ ಆವರ್ತಕ ವೆಚ್ಚ (Recurring Charges) ಹಾಗೂ ಸಿಬ್ಬಂದಿ ಮತ್ತು ಸಾದಿಲ್ವಾರು ವೆಚ್ಚವನ್ನು (Contingencies) ಭರಿಸಲು ಅವಕಾಶವಿರುವುದಿಲ್ಲ.

- ಈ ಘಟಕದಡಿ ಸಹಾಯಧನ ಪಡೆಯಲು ಇಚ್ಛಿಸುವ ಸಂಸ್ಥೆಗಳು ಸದರಿ ಯೋಜನೆಗೆ ರಾಷ್ಟ್ರೀಯ ತೋಟಗಾರಿಕೆ ಮಂಡಳಿಯಿಂದ ಅಥವಾ ಯಾವುದೇ ಸಂಘ / ಸಂಸ್ಥೆ / ಸರ್ಕಾರಿ ಮೂಲಗಳಿಂದ ಸಹಾಯಧನವನ್ನು ಪಡೆದಿಲ್ಲವೆಂಬ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡುವುದು.
- ಫಲಾನುಭವಿಯು ಸಹಾಯಧನ ಪಡೆಯಲು ಯಾವುದೇ ತಪ್ಪು ದಾಖಲೆಗಳನ್ನು ನೀಡಿರುವುದಿಲ್ಲ ಹಾಗೂ ಸಹಾಯಧನವನ್ನು ಯಾವ ಉದ್ದೇಶಕ್ಕಾಗಿ ಪಡೆಯಲಾಗಿರುತ್ತದೆಯೋ ಅದೇ ಉದ್ದೇಶಕ್ಕಾಗಿ ಬಳಸಲಾಗುವುದು ತಪ್ಪಿದ್ದಲ್ಲಿ ಸಹಾಯಧನವನ್ನು ಹಿಂದಿರುಗಿಸಲಾಗುವುದು ಎಂದು ಫಲಾನುಭವಿಯಿಂದ ಮುಚ್ಚಳಿಕೆ ಪತ್ರವನ್ನು ಪಡೆದು ಸಹಾಯಧನವನ್ನು ದುರುಪಯೋಗಪಡಿಸಿಕೊಳ್ಳದಂತೆ ಕ್ರಮವಹಿಸುವುದು.
- ಸ್ಪಾನ್ ಉತ್ಪಾದನಾ ಘಟಕವು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾದ ನಂತರ ಪ್ರತಿ ವರ್ಷ ನಿಗಧಿತ ವೇಳೆಯೊಳಗೆ ಸ್ಪಾನ್ ಉತ್ಪಾದನೆ ಮಾಡುವುದು ಮತ್ತು ಇಲಾಖೆ ನಿಗಧಿಪಡಿಸಿದ ದರಕ್ಕೆ ಮಾರಾಟ ಮಾಡುವುದು.
- ಮೇಲ್ಕಂಡ ಅಂಶಗಳಿಗೆ ಸದರಿ ಸರ್ಕಾರಿ/ಖಾಸಗಿ ಸಂಸ್ಥೆಯ ಮುಖ್ಯಸ್ಥರು ಹಾಗೂ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರವರು ರೂ. 100/- ಗಳ ಛಾಪಾ ಕಾಗದದಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡ ನಂತರವೇ ಅನುದಾನವನ್ನು ಬಿಡುಗಡೆ ಮಾಡುವುದು.

**ಸ್ಪಾನ್ ಉತ್ಪಾದನಾ ಘಟಕದ ಅಂದಾಜು ಖರ್ಚಿನ ವಿವರಗಳು :**

| ಕ್ರ.ಸಂ | ವಿವರಗಳು | ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| A | **ಕಟ್ಟಡಗಳ ನಿರ್ಮಾಣ / ಮಾರ್ಪಾಡು / ನವೀಕರಣ / ಮೂಲಭೂತ ಸೌಕರ್ಯಗಳ ನಿರ್ಮಾಣ ಇತ್ಯಾದಿ** | 6.00 |
| a | Building includes, working area, spawn multiplication room, Store room, Inoculation room and office room etc., | |
| B | **ಯಂತ್ರೋಪಕರಣಗಳ ಖರೀದಿ** | 14.00 |
| a | Laminar air flow (Clean air flow system) | |
| b | BOD incubator | |
| c | Autoclave vertical | |
| d | Microscope | |
| e | LPG cylinders | |
| f | Grain storage bins 200 kg cap each | |
| | Grain boiling containers of 50 liters cap | |
| g | 3 Lab tables, 1 office table, chair & 6 wooden stools | |
| h | Godrej alma rah with cash chest | |
| i | Hot plates | |
| j | Pressure cooker 20 liters cap | |
| k | Refrigerator 300 liters cap | |

| | | |
|---|---|---|
| l | Air conditioner 1 ton cap | |
| m | Miscellaneous (Bunsen burners / spirit lamps, Inoculation needles, Long forceps / Medium forceps and Weighing balance etc) | |
| | **Total** | **20.00** |
| Machineries / systems like Solar hot water system, Grain cleaning machine, Grain & chalk powder mixture can also be used | | |

ಮೇಲೆ ತಿಳಿಸಿರುವ ಘಟಕವಾರು ವೆಚ್ಚವು ಅಂದಾಜು ವೆಚ್ಚವಾಗಿರುತ್ತದೆ.

## 3. ಗೊಬ್ಬರ ತಯಾರಿಕಾ ಘಟಕ :

- ಈ ಘಟಕದಡಿ ಸರ್ಕಾರಿ / ಖಾಸಗಿ ವಲಯಗಳಲ್ಲಿ ಗೊಬ್ಬರ ತಯಾರಿಕಾ ಕೇಂದ್ರವನ್ನು ಸ್ಥಾಪಿಸಲು ಉತ್ತೇಜನವನ್ನು ನೀಡುವುದು. ಸರ್ಕಾರಿ ಸಂಸ್ಥೆಗಳಾದ ಕೃಷಿ ವಿಶ್ವವಿದ್ಯಾನಿಲಯ ಅಥವಾ ಇತರೆ ವಿದ್ಯಾ ಸಂಸ್ಥೆಗಳು, ಇಲಾಖೆಗಳು ಹಾಗೂ ಸಂಶೋಧನಾ ಸಂಸ್ಥೆಗಳಿಗೆ ಗರಿಷ್ಠ ಶೇ. 100 ರಷ್ಟು ರೂ. 30.00 ಲಕ್ಷಗಳನ್ನು ಹಾಗೂ ಖಾಸಗಿ ಸಂಸ್ಥೆಗಳಿಗೆ ಶೇ. 40 ರಷ್ಟು ಗರಿಷ್ಠ 12.00 ಲಕ್ಷಗಳ ಸಹಾಯಧನವನ್ನು ನೀಡಲಾಗುವುದು.
- ಖಾಸಗಿ ವಲಯಗಳಲ್ಲಿ ನಿರ್ಮಾಣಕ್ಕೆ RBI ಅನುಮೋದಿತ online banking (IFSC code, RTGS, NEFT ಇತರೆ) ಸೌಲಭ್ಯವನ್ನು ಹೊಂದಿರುವ ಬ್ಯಾಂಕಿನಿಂದ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ. ಸಾಲ ಪಡೆದಿರುವ ಕುರಿತು, ಮಂಜೂರಾತಿ ಪತ್ರ ಹಾಗೂ appraisal letter ನೀಡುವುದು. ಸದರಿ ಕಾರ್ಯಕ್ರಮವು credit Linked back ended subsidy ಆಗಿದ್ದು ದೀರ್ಘಾವಧಿ ಸಾಲ (Term Loan) ಮಂಜೂರಾಗಿರಬೇಕು. ಅಗ್ರಿಇನ್ಫ್ರಾಸ್ಟ್ರಕ್ಚರ್ ಫಂಡ್ ಯೋಜನೆಯಡಿ 200 ಲಕ್ಷಗಳವರೆಗಿನ ಸಾಲಕ್ಕೆ ಶೇ.3 ರ ಬಡ್ಡಿಯ ಕಡಿತವಿದ್ದು, ಫಲಾನುಭವಿಗಳಿಗೆ ಈ ಸವಲತ್ತನ್ನು ಪಡೆಯಲು ಮಾಹಿತಿ ನೀಡಿ ನೆರವಾಗುವುದು
- ಖಾಸಗಿ ವಲಯಗಳಲ್ಲಿ ಈ ಸಹಾಯಧನವು credit linked back ended subsidy ಆಗಿರುತ್ತದೆ. ಘಟಕದ ಕಾಮಗಾರಿಯನ್ನು ಅನುಷ್ಠಾನಗೊಳಿಸದಿದ್ದಲ್ಲಿ ಸಹಾಯಧನವನ್ನು ಪಾವತಿಸಿದ ದಿನಾಂಕದಿಂದ ರಾಷ್ಟ್ರೀಕೃತ ಬ್ಯಾಂಕ್ ಗಳು ವಿಧಿಸುವ ಬಡ್ಡಿ ದರದಲ್ಲಿ ಲೆಕ್ಕ ಹಾಕಿ ಅಸಲು ಮತ್ತು ಬಡ್ಡಿ ಸೇರಿಸಿ ವಾಪಸ್ಸು ಪಡೆಯಲು ಕ್ರಮವಹಿಸುವುದು.
- ಈ ಸಹಾಯಧನವನ್ನು ಗೊಬ್ಬರ ತಯಾರಿಕಾ ಘಟಕ ಸ್ಥಾಪಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಕಟ್ಟಡ ನಿರ್ಮಾಣ, ಮೂಲ ಸೌಕರ್ಯಗಳ ನಿರ್ಮಾಣ ಹಾಗೂ ಯಂತ್ರೋಪಕರಣಗಳ ಖರೀದಿ ಬಾಬ್ತುಗಳಿಗೆ ಮಾತ್ರವೇ ಉಪಯೋಗಿಸಿಕೊಳ್ಳುವುದು.
- ಗೊಬ್ಬರ ತಯಾರಿಕಾ ಘಟಕದ ಆವರ್ತಕ ವೆಚ್ಚ (Recurring Charges) ಹಾಗೂ ಸಿಬ್ಬಂದಿ ಮತ್ತು ಸಾದಿಲ್ವಾರು ವೆಚ್ಚವನ್ನು (Contingencies) ಭರಿಸಲು ಅವಕಾಶವಿರುವುದಿಲ್ಲ.
- ಈ ಘಟಕದಡಿ ಸಹಾಯಧನ ಪಡೆಯಲು ಇಚ್ಚಿಸುವ ಸಂಸ್ಥೆಗಳು ಸದರಿ ಯೋಜನೆಗೆ ರಾಷ್ಟ್ರೀಯ ತೋಟಗಾರಿಕೆ ಮಂಡಳಿಯಿಂದ ಅಥವಾ ಯಾವುದೇ ಸಂಘ / ಸಂಸ್ಥೆ / ಸರ್ಕಾರಿ ಮೂಲಗಳಿಂದ ಸಹಾಯಧನವನ್ನು ಪಡೆದಿಲ್ಲವೆಂಬ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡುವುದು.

- ಫಲಾನುಭವಿಯು ಸಹಾಯಧನ ಪಡೆಯಲು ಯಾವುದೇ ತಪ್ಪು ದಾಖಲೆಗಳನ್ನು ನೀಡಿರುವುದಿಲ್ಲ ಹಾಗೂ ಸಹಾಯಧನವನ್ನು ಯಾವ ಉದ್ದೇಶಕ್ಕಾಗಿ ಪಡೆಯಲಾಗಿರುತ್ತದೆಯೋ ಅದೇ ಉದ್ದೇಶಕ್ಕಾಗಿ ಬಳಸಲಾಗುವುದು ತಪ್ಪಿದ್ದಲ್ಲಿ ಸಹಾಯಧನವನ್ನು ಹಿಂದಿರುಗಿಸಲಾಗುವುದು ಎಂದು ಫಲಾನುಭವಿಯಿಂದ ಮುಚ್ಚಳಿಕೆ ಪತ್ರವನ್ನು ಪಡೆದು ಸಹಾಯಧನವನ್ನು ದುರುಪಯೋಗಪಡಿಸಿಕೊಳ್ಳದಂತೆ ಕ್ರಮವಹಿಸುವುದು.
- ಮೇಲ್ಕಂಡ ಅಂಶಗಳಿಗೆ ಸದರಿ ಸರ್ಕಾರಿ/ಖಾಸಗಿ ಸಂಸ್ಥೆಯ ಮುಖ್ಯಸ್ಥರು ಹಾಗೂ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರವರು ರೂ. 100/- ಗಳ ಛಾಪಾ ಕಾಗದದಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡ ನಂತರವೇ ಅನುದಾನವನ್ನು ಬಿಡುಗಡೆ ಮಾಡುವುದು.

**ಗೊಬ್ಬರ ತಯಾರಿಕಾ ಘಟಕದ ಅಂದಾಜು ಖರ್ಚಿನ ವಿವರಗಳು (ರೂ. ಲಕ್ಷಗಳಲ್ಲಿ):**

| ಕ್ರ.ಸಂ | ವಿವರಗಳು | ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1. | Working area | 3.00 |
| 2 | Substrate (chaff) cutting instruments / pulverizer | 3.00 |
| 3 | Compost turner | 6.00 |
| 4 | Pasteurized / sterilized substrate mixer | 3.00 |
| 5 | Pasteurizer / sterilizer | 0.75 |
| 6 | Hot water system | 0.75 |
| 7 | Substrate filling machine | 3.00 |
| 8 | Boiler | 3.00 |
| 9 | Substrate lifter | 4.50 |
| 10 | Miscellaneous tools and small equipments etc | 3.00 |
| | **Total** | **30.00** |

ಮೇಲೆ ತಿಳಿಸಿರುವ ಘಟಕವಾರು ವೆಚ್ಚವು ಅಂದಾಜು ವೆಚ್ಚವಾಗಿರುತ್ತದೆ.

## 4. ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕ:

- ಈ ಘಟಕದಡಿ ಖಾಸಗಿ ವಲಯಗಳಲ್ಲಿ ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಉತ್ತೇಜನವನ್ನು ನೀಡುವುದು. ಶೇ. 50 ರಷ್ಟು ಗರಿಷ್ಠ 1.00 ಲಕ್ಷದ ಸಹಾಯಧನವನ್ನು ನೀಡಲಾಗುವುದು ಹಾಗು ಪ್ರತಿ ಫಲಾನುಭವಿಗೆ ಗರಿಷ್ಠ 5 ಘಟಕಗಳ ವರೆಗೆ ನೀಡಲು ಅವಕಾಶವಿರುತ್ತದೆ.
- ಈ ಸಹಾಯಧನವನ್ನು ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕ ಸ್ಥಾಪಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಕಟ್ಟಡ ನಿರ್ಮಾಣ, ಮೂಲ ಸೌಕರ್ಯಗಳ ನಿರ್ಮಾಣ ಹಾಗೂ ಯಂತ್ರೋಪಕರಣಗಳ ಖರೀದಿ ಬಾಬ್ತುಗಳಿಗೆ ಮಾತ್ರ ಉಪಯೋಗಿಸಿಕೊಳ್ಳುವುದು.
- ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕವು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾದ ನಂತರ ಪ್ರತಿ ವರ್ಷ ನಿಗಧಿತ ವೇಳೆಯೊಳಗೆ ಅಣಬೆ ಉತ್ಪಾದನೆ ಮಾಡುವುದು ಮತ್ತು ಇಲಾಖೆ ನಿಗಧಿಪಡಿಸಿದ ದರಕ್ಕೆ ಮಾರಾಟ ಮಾಡುವುದು.

❖ ಮೇಲ್ಕಂಡ ಅಂಶಗಳಿಗೆ ಫಲಾನುಭವಿಯು ಹಾಗೂ ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ರವರು ರೂ. 100/- ಗಳ ಛಾಪಾ ಕಾಗದದಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡ ನಂತರವೇ ಅನುದಾನವನ್ನು ಬಿಡುಗಡೆ ಮಾಡುವುದು.

**ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕದ ಅಂದಾಜು ಖರ್ಚಿನ ವಿವರಗಳು (ರೂ. ಲಕ್ಷಗಳಲ್ಲಿ):**

| ಕ್ರ.ಸಂ | ವಿವರಗಳು | ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| I. | Fabrication works | |
| 1 | a. 40 ಸಂಖ್ಯೆ (6 ಮೀ ಉದ್ದದ) 1.5 Inch round / square pipe<br>b. 40 ಸಂಖ್ಯೆ 3X3 inch square flats<br>c. 40 ಸಂಖ್ಯೆ 2inch round pipe cut pieces | Rs.40,000 |
| 2 | Insect proof nylon net to cover windows/ ventilation and other open Spaces including labor charges for fixing | Rs.8,500 |
| 3 | a. Plastic rope (8620 mts)<br>b. Poly propylene covers (Min.150 micron)<br>c. Paddy straw, spawns & other miscellaneous expenses. | Rs.20,000<br>Rs.5,500<br>Rs.10,000 |
| II. | Sterilization of Substrate | |
| 1 | Sterilization mechanism including electrification (Auto clave of minimum 100 ltrs)- Mandatory | Rs.71,500 |
| I1. | Machineries and tools required | |
| 1 | a. Humidifying system includes'/ HP motors, Thermo Hygrometer mobility sensor device, 30 no's pipes, sprinklers, fittings, overhead tank and gunny bags etc,.<br>b. Choppers and accessories for straw preparation | Rs.17,000<br>Rs.13,000 |
| IV. | Post Harvest Management | |
| 1 | Harvesting tools, trays, crates, packing and weighing machine and Packing covers | Rs.11,500 |
| v. | Other necessary accessories and inputs | Rs.3,000 |
| vI. | Note: Utilization of Solar Water Heater in Mushroom Production can be Encouraged as fuel saving (Eco-friendly activity) | |
| | **Total** | **2,00,000** |

ಮೇಲೆ ತಿಳಿಸಿರುವ ಘಟಕವಾರು ವೆಚ್ಚವು ಅಂದಾಜು ವೆಚ್ಚವಾಗಿರುತ್ತದೆ.

❖ ಫಲಾನುಭವಿಯು ಸಹಾಯಧನ ಪಡೆಯಲು ಯಾವುದೇ ತಪ್ಪು ದಾಖಲೆಗಳನ್ನು ನೀಡಿರುವುದಿಲ್ಲ ಹಾಗೂ ಸಹಾಯಧನವನ್ನು ಯಾವ ಉದ್ದೇಶಕ್ಕಾಗಿ ಪಡೆಯಲಾಗಿರುತ್ತದೆಯೋ ಅದೇ ಉದ್ದೇಶಕ್ಕಾಗಿ ಬಳಸಲಾಗುವುದು ತಪ್ಪಿದ್ದಲ್ಲಿ ಸಹಾಯಧನವನ್ನು ಹಿಂದಿರುಗಿಸಲಾಗುವುದು ಎಂದು ಫಲಾನುಭವಿಯಿಂದ ಮುಚ್ಚಳಿಕೆ ಪತ್ರವನ್ನು ಪಡೆದು ಸಹಾಯಧನವನ್ನು ದುರುಪಯೋಗಪಡಿಸಿಕೊಳ್ಳದಂತೆ ಕ್ರಮುವಹಿಸುವುದು.

**ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ, ಫಲಾನುಭವಿಗಳ ಆಯ್ಕೆ , ತಾಂತ್ರಿಕ ಪರಿಶೀಲನೆ ಮತ್ತು ಸಹಾಯಧನ ಪಾವತಿಸುವ ವಿಧಾನ:**

1. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರು MIDH-ರಾಷ್ಟ್ರೀಯ ತೋಟಗಾರಿಕೆ ಮಿಷನ ಯೋಜನೆಯ ಅಣಬೆ ಉತ್ಪಾದನಾ ಘಟಕ, ಸ್ಪಾನ್ ಉತ್ಪಾದನಾ ಘಟಕ, ಗೊಬ್ಬರ ತಯಾರಿಕಾ ಘಟಕ ಹಾಗ ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕ ಕಾರ್ಯಕ್ರಮದ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿ ಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ವಿವಿಧ ಮಾಧ್ಯಮಗಳು ಹಾಗೂ ಜಿಲ್ಲೆಯ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

2. ಪ್ರಕಟಣೆಯಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಜಿಲ್ಲೆಗೆ ನಿಗಧಿಪಡಿಸಿದ ಗುರಿ ಮತ್ತು ನಿಗಧಿಪಡಿಸಿದ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕರಿಸಿದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಇರತಕ್ಕದ್ದು.

3. ರೈತರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿಗಳ ಅಂತಿಮ ಪಟ್ಟಿ ಮಾಡಿ ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ನೀಡುವುದು.

4. ರೈತರನ್ನು FRUITS ತಂತ್ರಾಂಶದಲ್ಲಿ ಖಡ್ಡಾಯವಾಗಿ ನೋಂದಣಿಮಾಡಿ FID ಸಂಖ್ಯೆಯನ್ನು ಪಡೆಯುವುದು. ಅದರೊಂದಿಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಲಾದ ಬ್ಯಾಂಕ್ ಖಾತೆಯ ವಿವರಗಳನ್ನು ಅರ್ಜಿಯಲ್ಲಿ ನಮೂದಿಸುವುದು.

5. ತಂತ್ರಾಂಶದಲ್ಲಿ ದೊರೆಯುವ FID ಸಂಖ್ಯೆಯ ಸಿದ್ದ ದಾಖಲಾತಿ/ ಮಾಹಿತಿಯನ್ನು ಬಳಸಿಕೊಂಡು, ಹೆಚ್ಚುವರಿ ದಾಖಲಾತಿ/ ಮಾಹಿತಿಯ ಅವಶ್ಯಯವಿದ್ದಲ್ಲಿ ಮಾತ್ರ ಅಂತಹ ದಾಖಲಾತಿಗಳನ್ನು ರೈತರಿಂದ ಪಡೆಯುವುದು.

6. ಆಸಕ್ತಿಯುಳ್ಳ ರೈತರ ಈ ಕೆಳಕಂಡ ದಾಖಲಾತಿಗಳನ್ನು ಅರ್ಜಿಯೊಂದಿಗೆ ಪಡೆದು ಆನ್ ಲೈನ್ ಮೂಲಕ HASIRU ತಂತ್ರಾಂಶದಲ್ಲಿ BID ಸೃಜಿಸುವುದು.

☐ ನಿಗಧಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ.

☐ ಮೇಲ್ಕಂಡ ಘಟಕಗಳನ್ನು ನಿರ್ಮಿಸಲು ಉದೇಶಿಸುವ ಫಲಾನುಭವಿಯ ಹೆಸರಿನಲ್ಲಿ ಜಮೀನು ಹೊಂದಿರಬೇಕು (ಜನವರಿ-2025ರ ನಂತರದ ಪಹಣಿ (RTC) ಲಗತ್ತಿಸಬೇಕು)

7. ಜಿಲ್ಲೆಯ ತೋಉನಿ (ಜಿಪಂ) ರವರು ಮೇಲ್ಕಂಡ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಅನುಮೋದಿತ ಕ್ರಿಯಾ ಯೋಜನೆಯ ಮಿತಿಯಲ್ಲಿ ಫಲಾನುಭವಿಗೆ Letter of intentನ್ನು 5 ದಿನಗಳೊಳಗಾಗಿ ನೀಡುವುದು. ಫಲಾನುಭವಿಯು ಕಾರ್ಯಾದೇಶ ಪಡೆದ ನಂತರವೇ ಘಟಕವನ್ನು ಸ್ಥಾಪಿಸುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು

8. ಇಲಾಖೆ ರವರಿಂದ Letter of Intentನ್ನು ಪಡೆದ ನಂತರ ರೈತರು ಸದರಿ ಯೋಜನೆ ಅನುಸಾರ 45 ರಿಂದ 60 ದಿನಗಳ ಒಳಗಾಗಿ ಘಟಕದ ಕಾಮಗಾರಿ ಮತ್ತು ಉಪಕರಣಗಳನ್ನು ಖರೀದಿಸಿ ದಾಖಲಾತಿಗಳನ್ನು ಹಿಸತೋನಿ/ಸತೋನಿ ಕಛೇರಿಗೆ ಸಲ್ಲಿಸುವುದು.

**ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕ ಹೊರತುಪಡಿಸಿ ಉಳಿದ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಸಂಬಂಧಿಸಿದ ನಕ್ಷೆ ಹಾಗೂ ಅಂದಾಜು ಪಟ್ಟಿಯನ್ನು ಮಾರ್ಗಸೂಚಿಯಂತೆ ನಿರ್ಮಿಸಿರುವುದಾಗಿ ಅಧಿಕೃತ ಪರವಾನಗಿ ಪಡೆದ ಇಂಜಿನಿಯರ್**

**ರಿಂದ ದೃಢೀಕರಣ ಮಾಡಿಸಿಕೊಂಡು ಅಳವಡಿಸುವುದು ಹಾಗೂ ಸಿವಿಲ್ ಕಾಮಗಾರಿಗಳಿಗೆ ಸಂಭಂದಪಟ್ಟಂತೆ ಚಾರ್ಟರ್ಡ್ ಇಂಜಿನಿಯರ್ ರವರಿಂದ ಮೌಲ್ಯಮಾಪನ ವರದಿಯನ್ನು ಪಡೆದು ಖಾತರಿಪಡಿಸಿಕೊಳುವುದು.**

- ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಕಟ್ಟಡದ ಕಾಮಗಾರಿ ಬಿಲ್ಲು ಹಾಗೂ ಉಪಕರಣಗಳ ಕೊಟೇಷನ್ ಹಾಗೂ ಖರೀದಿ ಬಿಲ್ಲು (Invoice Bill/GST bill )ಸಲ್ಲಿಸುವುದು
- ಸದರಿ ನಿರ್ಮಾಣ ಹಂತದಲ್ಲಿ ಇಲಾಖಾ ಅಧಿಕಾರಿಗಳೊಂದಿಗೆ ತೆಗೆದ ವಿವಿಧ ಜಿಪಿಎಸ್ ಛಾಯಾಚಿತ್ರಗಳನ್ನು ಪ್ರಸ್ತಾವನೆಯೊಂದಿಗೆ ಲಗತ್ತಿಸುವುದು ಕಡ್ಡಾಯ.
- **ಅಣಬೆ ಉತ್ಪಾದನಾ ಘಟಕಗಳಿಗೆ ಬೇಕಾದ ಉಪಕರಣಗಳು ಮತ್ತು ಯಂತ್ರಗಳನ್ನು ಸಂಬಂಧಿಸಿದ ಲೋನ್ ಖಾತೆಯಿಂದ ಪಾವತಿಯಾಗಿರುವುದನ್ನು ದೃಡಪಡಿಸಿಕೊಳುವುದು.**
- ಫಲಾನುಭವಿ/ಸಂಸ್ಥೆಯು ಉದ್ದೇಶಿತ ಕಾರ್ಯಕ್ರಮಕ್ಕಾಗಿ ಬ್ಯಾಂಕ್ ನಲ್ಲಿ ಸಾಲ ಪಡೆಯುವುದು ಕಡ್ಡಾಯವಾಗಿದ್ದು (ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕ ಹೊರತುಪಡಿಸಿ) , ಸರ್ಕಾರದಿಂದ ನೀಡುವ ಸಹಾಯಧನವನ್ನು ಫಲಾನುಭವಿ/ ಸಂಸ್ಥೆಯು ತೆಗೆದುಕೊಂಡ ಸಾಲದ ಖಾತೆಗೆ ಜಮೆ ಮಾಡುವುದು.

9. ರೈತರು ಸಲ್ಲಿಸುವ ಸಹಾಯಧನ ಅರ್ಜಿ ಮತ್ತು ದಾಖಲಾತಿಗಳನ್ನು ನಿಗಧಿತ ದಿನಾಂಕದೊಳಗೆ ಕಡ್ಡಾಯವಾಗಿ ಸಲ್ಲಿಸುವುದು ಹಾಗೂ ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ ರವರು ಕಡ್ಡಾಯವಾಗಿ ಶೇ. 100% ರಷ್ಟು ಅಣಬೆ ಉತ್ಪಾದನಾ ಘಟಕ, ಸ್ಪಾನ್ ಉತ್ಪಾದನಾ ಘಟಕ, ಗೊಬ್ಬರ ತಯಾರಿಕಾ ಘಟಕ ಹಾಗೂ ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕದ ಪರಿಶೀಲನೆ ನಡೆಸಬೇಕು. ಸತೋಅ ರವರು ಪರಿಶೀಲಿಸಿದ ಪೈಕಿ ಕನಿಷ್ಠ ಶೇ. 50 ರಷ್ಟು ಘಟಕಗಳನ್ನು ತಾಲ್ಲೂಕು ಸತೋನಿ/ಹಿಸತೋನಿ ರವರು ಪರಿಶೀಲಿಸಬೇಕು. ಸತೋಅ ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರೂ ನ್ಯೂನತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ, ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡಬೇಕು. ಜಿಲ್ಲೆಯ ತೋಉನಿ (ಜಿಪಂ) ರವರು ಶೇ.10 ರಷ್ಟು ಅಣಬೆ ಉತ್ಪಾದನಾ ಘಟಕ, ಸ್ಪಾನ್ ಉತ್ಪಾದನಾ ಘಟಕ, ಗೊಬ್ಬರ ತಯಾರಿಕಾ ಘಟಕ ಹಾಗೂ ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕದ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 5 ರಷ್ಟು ಹಾಗೂ ಸತೋಅ ರವರು ಪರಿಶೀಲಿಸಿರುವ ಶೇ. 5 ರಷ್ಟು ಘಟಕ ಮರುಪರಿಶೀಲನೆ ಮಾಡುವುದು. ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಹಿಸತೋನಿ / ಸತೋನಿ ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.ವಿಭಾಗೀಯ ಜಂಟಿ ನಿರ್ದೇಶಕರು ರವರು ಶೇ. 5 ರಷ್ಟು ಘಟಕ ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ. 2 ರಷ್ಟು ಹಾಗೂ ಹಿಸತೋನಿ / ಸತೋನಿ ರವರು ಪರಿಶೀಲಿಸಿರುವ ಶೇ. 3 ರಷ್ಟು ಮರುಪರಿಶೀಲನೆ ಮಾಡುವುದು. ಅಪರ ನಿರ್ದೇಶಕರು/ ಜಂಟಿ ನಿರ್ದೇಶಕರು ರವರು ಶೇ.1 ರಷ್ಟು ಪರಿಶೀಲನೆ ಕಡ್ಡಾಯವಾಗಿ ಮಾಡುವುದು. ಅದರಲ್ಲಿ ವಿಭಾಗೀಯ ಜಂಟಿ ನಿರ್ದೇಶಕರು ಪರಿಶೀಲಿಸಿರುವ ಶೇ.0.5 ರಷ್ಟು ಹಾಗೂ ತೋಉನಿ (ಜಿಪಂ) ರವರು ಪರಿಶೀಲಿಸಿರುವ ಶೇ.0.5 ರಷ್ಟು ಘಟಕ ಮರುಪರಿಶೀಲನೆ ಮಾಡುವುದು. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ Photo ಗಳನ್ನು ತೆಗೆದು ಇಲಾಖೆಯ ವೆಬ್ ಸೈಟ್ ನಲ್ಲಿ upload ಮಾಡುವುದು.

**10. ಹಿಸತೋನಿ ಮತ್ತು ಸತೋಅ ರವರು ಸಹಾಯಧನ ಪಡೆದ ನಿರ್ಮಿಸಲಾದ ಘಟಕಗಳಿಗೆ 2 ವರ್ಷಗಳವರೆಗೂ ಭೇಟಿನೀಡಿ ಉದ್ದೇಶಿತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುವ ಬಗ್ಗೆ ಪರಿಶೀಲಿಸಿ ವರ್ಷವಾರು ವರದಿಯನ್ನು ತೋಉನಿ (ಜಿಪಂ) ಮತ್ತು ರಾತೋಮಿ ಕಛೇರಿಗೆ ಸಲ್ಲಿಸುವುದು. 2 ವರ್ಷಗಳ ನಂತರ ಘಟಕಗಳ ನಿರ್ವಹಣೆಯ ಜವಾಬ್ದಾರಿಯು ಫಲಾನುಭವಿ/ರೈತರದ್ದಾಗಿರುತ್ತದೆ. ಈ ಬಗ್ಗೆ ಫಲಾನುಭವಿ /ರೈತರಿಗೆ ತಿಳುವಳಿಕೆ ನೀಡಿ ಖಡ್ಡಾಯವಾಗಿ ಮುಚ್ಚಳಿಕೆ ಪತ್ರವನ್ನು ಪಡೆಯುವುದು.**

**ಸಹಾಯಧನ ವಿತರಣೆ:**

ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ MIDH- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲಾಂಛನ (Logo) ದೊಂದಿಗೆ ಸಂಕ್ಷಿಪ್ತ ವಿವರಗಳುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಅಣಬೆ ಉತ್ಪಾದನಾ ಘಟಕ, ಸ್ಪಾನ್ ಉತ್ಪಾದನಾ ಘಟಕ, ಗೊಬ್ಬರ ತಯಾರಿಕಾ ಘಟಕ ಹಾಗೂ ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕದ ಮುಂಭಾಗದಲ್ಲಿ ಪ್ರದರ್ಶಿಸಬೇಕು.

**ಆರ್ಥಿಕ ಪ್ರತ್ಯಾ ಯೋಜನೆ (Delegation of Power) :**

ಈ ಕಾರ್ಯಕ್ರಮದಲ್ಲಿ ಮಾರ್ಗಸೂಚಿಯಂತೆ ಸಹಾಯಧನ ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ: ತೋಇ 157 ತೋಸೇಪ 2017, ದಿ.04.10.2017ರ ರನ್ವಯ ಪರಿಷ್ಕೃತವಾಗುವ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಆರ್ಥಿಕ ಇಲಾಖೆಯ ಆರ್ಥಿಕ ಪ್ರತ್ಯಾಯೋಜನೆಯ ಮಾರ್ಗಸೂಚಿಯನ್ನು ಪಾಲಿಸುವುದು. ಕಾರ್ಯಕ್ರಮದ ಅಳವಡಿಕೆಯ ಸಹಾಯಧನ ಮೊತ್ತವನ್ನು DBT ಮುಖಾಂತರ ಫಲಾನುಭವಿಯ Term loan/ಸಾಲದ ಖಾತೆಗೆ ನೇರವಾಗಿ ಜಮಾ ಮಾಡುವುದು.

ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕದ ಸಹಾಯಧನ ಮೊತ್ತವನ್ನು DBT ಮುಖಾಂತರ ಫಲಾನುಭವಿಯ ಖಾತೆಗೆ ನೇರವಾಗಿ ಜಮಾ ಮಾಡುವುದು.

**Reporting and documentation** (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು):

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 2ನೇ ದಿನಾಂಕದ ಒಳಗಾಗಿ ತಪ್ಪದೇ KSHMA ಕಛೇರಿಗೆ ಸಲ್ಲಿಸುವುದು.
2. **ವಾರ್ಷಿಕ ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಕ್ರಮಕೈಗೊಳ್ಳುವುದು. ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಭರಿಸಲು ಸಾಧ್ಯವಾಗದಿದ್ದಲ್ಲಿ 3ನೇ ತ್ರೈಮಾಸಿಕದ (3rd trimester) ಒಳಗಾಗಿ ಅನುದಾನದ ಬೇಡಿಕೆಯನ್ವಯ ಅಂತರ ಘಟಕಗಳಲ್ಲಿ ಮಾರ್ಪಾಡುಗಳನ್ನು ನಿರ್ದೇಶನಾಲಯದಿಂದ ಅನುಮೋದನೆ ಪಡೆಯುವುದು. ತದನಂತರ ಯಾವುದೇ ಮಾರ್ಪಾಡುಗಳನ್ನು ಪರಿಗಣಿಸಲಾಗುವುದಿಲ್ಲ.**
3. ಎಲ್ಲಾ ಫಲಾನುಭವಿಗಳನ್ನೊಳಗೊಂಡ ಜಿಪಿಎಸ್ ಫೋಟೋಗಳನ್ನು ಪ್ರತಿ ತಿಂಗಳ ಅಂತ್ಯದಲ್ಲಿ ತಪ್ಪದೇ ಇಲಾಖಾ ವೆಬ್ ಸೈಟ್ ನಲ್ಲಿ ಅಳವಡಿಸಲು ಅಗತ್ಯ ಕ್ರಮವಹಿಸುವುದು.
4. ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ ಕಾರ್ಯನಿರ್ವಾಹಕ ನಿರ್ದೇಶಕರು, KSHMA ಮತ್ತು ತೋಟಗಾರಿಕೆ ಮಾಹಿತಿ ಕೇಂದ್ರ ರವರಿಗೆ ಕಳುಹಿಸುವುದು.
5. 2025-26 ನೇ ಸಾಲಿನ ಮಾರ್ಚ್ ಮಾಹೆಯ ಅಂತ್ಯಕ್ಕೆ ಫಲಾನುಭವಿಗಳ ವಿವರವನ್ನು ಕಡ್ಡಾಯವಾಗಿ KSHMA ಕಛೇರಿಗೆ ಕಳುಹಿಸುವುದು.

Digitally signed by
RAMESH DODDAMETIKURKE
Date: 23-05-2025 18:01:02

**ಮಿಷನ್ ನಿರ್ದೇಶಕರು**

**ಮತ್ತು**

**ತೋಟಗಾರಿಕೆ ನಿರ್ದೇಶಕರು**

# Mushroom - Check List

| | |
|---|---|
| 1 | Name of the project. |
| 2 | Type of Activity. |
| 3 | Objectives. |
| 4 | Justification |
| 5 | Location of the project with address: - |
| 6 | Constitution |
| 7 | Management |
| 8 | Status |
| 9 | Brief background of promoters and activities |
| 10 | Cost of Project<br>a. Main processing building & Drying yard<br>b. Plant and Machinery<br>c. Miscellaneous fixed assets<br>d. Working capital margin<br>e. Pre-operative expenses |
| 11 | Means of finance<br>a. Promoter Share<br>b. Bank loan<br>c. Subsidy |
| 12 | Details of Cost of Plant & Machinery/equipment supported by quotations. |
| 13 | Details of the Building construction and the cost duly certified. |
| 14 | Area of operation with special reference to NHM Districts to be covered. |
| 15 | Availability of raw material, name of the cluster and District along with the major crops |
| 16 | Backward linkages with farmers with reference to either providing services or purchase of raw material |
| 17 | No. of farmers/ orchardists to be benefited. |
| 18 | SWOT Analysis. |
| 19 | Financial Analysis – IRR, NPW, Cost benefit Ratio, Break-even point, DER, DSER, |

| | |
|---|---|
| | Projected balance sheet etc |
| 20 | Insurance of the fixed assets |
| 21 | Name of the sponsoring bank along with the details of Techno-economical appraisal reports, copy of sanction letter and Detailed Project Report (DPR) as submitted to bank |
| 22 | Certificate regarding Non-availing of subsidy from any other Central/State Govt. Departments |
| 23 | Social benefits with special reference to employment generation |
| 24 | Details of the sustainability of the project with special reference to its capacity to generate income since only one time grant is admissible |
| 25 | Implementation schedule |
| 26 | Amount of subsidy sought. |